ಶ್ರೀ ಆರ್. ಜಿ. ವಾಲ.—1961 ರಲ್ಲಿ ಆಂಧ್ರದಲ್ಲಿ ಕೂಡ ಇಂತಹ ದುರಂತವಾಗಿತ್ತು. ಇಲ್ಲಿ ನಡೆಸಿದ ನಾವಿಕರಿಗೆ ಶಿಕ್ಷೆ ಕೂಡ ಆಗಿತ್ತು. ಇದೇ ರೀತಿ ಇಲ್ಲಿ ನಿಯಮ ಮಾಡುವಾಗ ದೋಣಿ ನಡೆಸುವವರು ಅಜಾಗರೂಕತೆಯಿಂದ ನಡೆಸಿದರೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಾರೆ ಎಂದೇಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ನಾವಿಕರನ್ನು ಶಿಕ್ಷೆಗೆ ಗುರಿ ಮಾಡುವ ಪ್ರಸಂಗ ಕಾಣುವುದಿಲ್ಲ. ಇದರಲ್ಲಿ ನಾವಿಕನ ಜವಾಬುದಾರಿ ಎಷ್ಟುಮಟ್ಟಿಗೆ ಇದೆ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಅನೇಕ ಕಡೆ ನದಿಗಳನ್ನು ದಾಟುವುದಕ್ಕೆ ಸೇತುವೆಗಳನ್ನು ಕಟ್ಟಬೇಕಾಗುತ್ತದೆ. ಎಲ್ಲ ನದಿಗಳಿಗೂ ಬ್ರಿಡ್ಜ್‌ಗಳನ್ನು ಕಟ್ಟುವುದು ಎಂದರೆ ಬಹಳ ಕಷ್ಟವಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಈ ದೇಶದಲ್ಲಿ ಬಹಳ ದೊಡ್ಡ ನದಿಗಳಾದ ಗೋದಾವರಿ, ಗಂಗಾ, ಬ್ರಹ್ಮಪುತ್ರಾ ಇತ್ಯಾದಿಗಳ ಮೇಲೆ ಕೂಡ ಸೇತುವೆಗಳನ್ನು ಕಟ್ಟಿದ್ದರೂ ಒಂದೊಂದು ವೇಳೆ ಇಂತಹ ದುರಂತಗಳು ಆಗುತ್ತವೆ. ಇದನ್ನು ತಪ್ಪಿಸಲು ಅವರೂ ತಕ್ಕ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ನಾವೂ ಕೂಡ ಇಲ್ಲಿ ಇಂತಹ ದುರಂತಗಳು ಆದಾಗ ಇದನ್ನು ತಪ್ಪಿಸುವುದಕ್ಕೆ ಹೇಗೆ ಸಾಧ್ಯ ಎನ್ನುವುದನ್ನು ಇಲ್ಲಿ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ನ್ಯಾಪನರ್ ಹೈ ವೇ ನಂಬರು 13 ರ ಮೇಲೆ ಕುಂದಗಿ ಎನ್ನುವ ಸ್ಥಳದಲ್ಲಿ ಇದೇ ತರಹದ ಒಂದು ದುರಂತ 1961 ರಲ್ಲಿ ಆಗಿತ್ತು. ಇಲ್ಲಿ ಕೂಡ ಮುಂದೆ ಇಂತಹ ಕಷ್ಟಗಳು ಬರದಿರಲು ಎಂದು ಅಲ್ಲಿ ಸಿಮೆಂಟು ಮಾರ್ಟರ್‌ನಿಂದ ಬಂಡು ಮಾಡಿಸಿ ಹಾಕುವ ವ್ಯವಸ್ಥೆ ಮಾಡಬೇಕೆಂದು ಯೋಚನೆ ಮಾಡಿದ್ದರು. ಇಲ್ಲೂ ಕೂಡ ಇದೇ ರೀತಿ ಇಲ್ಲಿನ ಕಂಟ್ರಾಕ್ಟರಿಗೆ ಸರಿಯಾದ ಒಂದು ಬಂಡು ಹಾಕಿಸುವ ಬಗ್ಗೆ ವಿಚಾರ ಮಾಡಬೇಕು ಎನ್ನುವುದನ್ನು ಯೋಚಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇಲ್ಲಿ ಯಾವ ತರಹದ ಬಂಡನ್ನು ಮಾಡುವುದು ಸಾಧ್ಯ ಎನ್ನುವುದನ್ನು ಇಲ್ಲಿನ ಕಂಟ್ರಾಕ್ಟರುಗಳೊಡನೆ ವಿಚಾರ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿ ನಾರಾಯಣಪುರ ಹಾಗೂ ಆಲಮಟ್ಟಿ ಪೂರ್ತಿ ಆಗುವುದಕ್ಕಿಂತ ಮುನ್ನ ಉದ್ಭವವಾಗಿರುವುದು ಇನ್ನು ಮುಂದೆ ಇಂತಹ ದೊಡ್ಡ ಪ್ರಮಾಣದ ಕಷ್ಟಗಳು ಬರಲಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ.

QUESTIONS FOR ANSWERS ON THE DAY
(but not taken up)
Water Supply Scheme to Kalghatagi

154. **Sri F. S. PATIL** (Kalghatgi).—

Will the Minister for Development be pleased to state :—

(*a*) whether it is a fact that they have sanctioned a scheme for supplying drinking water to the people of Kalghatgi under N.R.W.S.;

(*b*) the date on which the above scheme was sanctioned ;

(*c*) whether they have received the contribution from Kalghatgi Town Pancayat towards the said scheme ;

(*d*) the obstacles in starting the work of this scheme ;

(*e*) when the work relating to this scheme will be started ?

Sri P. M. NADGOUDA (Minister for Development).—

(*a*) Yes.

(*b*) 12-4-1967.

(*c*) First instalment of Rs. 25,600 has been received.

(*d*) The panchayat has to pay the remaining instalment amount.

(*e*) It is started.